ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಲೂರು : ಮಾನ್ಯ ಅಧ್ಯಕ್ಷರೆ, ಜಲಾನಯನದಲ್ಲಿ ಸಾಗರ ತಾಲ್ಲೂಕಿನಲ್ಲಿ 50 ಪರ್ಸೆಂಟ್ ಭ್ರಷ್ಟಾಚಾರ ನಡೆದಿದೆ ಎಂದು ಸಚಿವರು ಉತ್ತರ ಕೊಟ್ಟಿದ್ದಾರೆ. ನನ್ನ ಲೆಕ್ಕದಲ್ಲಿ 75 ಪರ್ಸೆಂಟ್ ಭ್ರಷ್ಟಾಚಾರ ಅಲ್ಲಿ ನಡೆದಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ? 150 ಕೋಟಿ ರೂಪಾಯಿಗಳಷ್ಟು ಎಕ್ಸ್‌ಟ್ರಾ ಹಣವನ್ನು ಜಲಾನಯನಕ್ಕೆ ಕೊಟ್ಟಿದ್ದಾರೆ. ಈ ತರಹ ಭ್ರಷ್ಟಾಚಾರ ನಡೆದಿರುವುದರಿಂದ, ಇನ್ನೂ ಹೆಚ್ಚಿನ ಅನುದಾನವನ್ನು ಅಲ್ಲಿಗೆ ಕೊಟ್ಟಿರುವುದರಿಂದ, ಇದರ ಬಗ್ಗೆ ತನಿಖೆಯಾಗಬೇಕೆಂದು ನಾನು ಕೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, 486.87 ಕೋಟಿ ರೂಪಾಯಿ ಜಲಾನಯನದಲ್ಲಿ ಖರ್ಚಾಗಿದೆ. ಭ್ರಷ್ಟಾಚಾರವಾಗಿದೆ. 50 ಭಾಗ ಆಗಿಲ್ಲ. ಅದರಲ್ಲಿ 18 ಲಕ್ಷದ 82 ಸಾವಿರ ರೂಪಾಯಿ ಭ್ರಷ್ಟಾಚಾರವಾಗಿದೆ. ಅದರಲ್ಲಿ 54 ದೂರುಗಳು ಬಂದಿವೆ.

ಶ್ರೀ ವಾಟಾಳ್ ನಾಗರಾಜ್ : ಭ್ರಷ್ಟಾಚಾರ ಎಷ್ಟು ಪ್ರಮಾಣದಲ್ಲಿ ಆಗಿರಬಹುದು?

ಅಧ್ಯಕ್ಷರು : ಅವರು ಉತ್ತರ ಕೊಡುತ್ತಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ : ಇಷ್ಟು ವಯಸ್ಸಾದರೂ ಕೂಡ ನೀವು ಇನ್ನೂ ಹುಡುಗರಿದ್ದೀರಿ. 21 ಸಾಬೀತಾಗಿಲ್ಲ. 14 ಆಡಳಿತಾತ್ಮಕ ಲೋಪದೋಷಗಳಿವೆ. ಅದರಲ್ಲಿ 11 ಪ್ರಕರಣಗಳಲ್ಲಿ 18 ಲಕ್ಷದ 82 ಸಾವಿರ ರೂಪಾಯಿ ಮಿಸ್–ಅಪ್ರೋಪ್ರಿಯೇಷನ್ ಆಗಿದೆ. ಅದಕ್ಕೆ ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿ ಆಗಿದೆ. ಅದರಲ್ಲಿ ಯಾರೇ ಎಷ್ಟೇ ದೊಡ್ಡವರಿರಲಿ, ನಾವು ಅವರನ್ನು ಬಿಡುವುದಿಲ್ಲ. ಕ್ರಿಮಿನಲ್ ಕೇಸ್ ಹಾಕುವುದಕ್ಕೆ ನಾನು ಹಿಂದೆ ಹೋಗುವುದಿಲ್ಲ. ನಾನು ಅದನ್ನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದೇನೆ. 486 ಕೋಟಿ ರೂಪಾಯಿಗಳ ವ್ಯವಸ್ಥೆಯಲ್ಲಿ 18 ಲಕ್ಷ ರೂಪಾಯಿ ಆ ರೀತಿ ಆಗಿದೆ. ಇನ್ನೂ ಅದಕ್ಕೆ 150 ಕೋಟಿ ರೂಪಾಯಿಗಳನ್ನು ಈ ಸಾರಿ ನಾವು ಖರ್ಚು ಮಾಡುವವರಿದ್ದೇವೆ. ಅದಕ್ಕೆ ನೀವು ಇದನ್ನು ಎತ್ತಿಕೊಳ್ಳಲೇ ಬೇಡಿ ಎಂದು ಹೇಳುವುದು ತಪ್ಪಾಗುತ್ತದೆ. ನಾವು ಅದನ್ನು ಮಾಡಲೇಬೇಕಾಗುತ್ತದೆ. ಇಂಥದ್ದು ಆಗದ ಹಾಗೆ, ಮರುಕಳಿಸದ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ಸದಸ್ಯರಿಗೆ ಹೇಳಲು ಇಚ್ಛೆಪಡುತ್ತೇನೆ.

ರಾಜ್ಯದಲ್ಲಿನ ಕೃಷಿ ಭೂಮಿಯ ವಿಸ್ತೀರ್ಣ

21 (271) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಲಭ್ಯವಿರುವ ಕೃಷಿ ಯೋಗ್ಯ ಭೂಮಿಯ ವಿಸ್ತೀರ್ಣ ಎಷ್ಟು;

ಆ) ಇದರಲ್ಲಿ ಮಳೆ ಆಶ್ರಿತ ಕೃಷಿ ಪ್ರದೇಶ ಎಷ್ಟು;

ಇ) ಮಳೆ ಆಶ್ರಿತ ಕೃಷಿ ಪ್ರದೇಶದಲ್ಲಿ ಸರ್ಕಾರದ ವಿವಿಧ ಯೋಜನೆಗಳಿಂದ ಮಣ್ಣು ಹಾಗೂ ನೀರು ಸಂಗ್ರಹಣೆಗಾಗಿ ಕೈಗೊಂಡಿರುವ ಕ್ರಮಗಳಾವುವು;

ಈ) ಈ ಕ್ರಮಗಳಿಂದ ಜಿಲ್ಲಾವಾರು ಎಷ್ಟು ಕ್ಷೇತ್ರಕ್ಕೆ ಪ್ರಯೋಜನವಾಗಿದೆ;

ಊ) ಈಗಾಗಲೇ ಜಲ-ನೆಲ ಸಂರಕ್ಷಣೆಗಾಗಿ ಯಾವ ಯೋಜನೆಗಳೂ ಅನುಷ್ಠಾನಗೊಳ್ಳದ ಕ್ಷೇತ್ರದಲ್ಲಿ ಕೆಲಸ ಮುಂದುವರೆಸಲಾಗುವುದೇ: (ವಿವರಗಳನ್ನು ನೀಡುವುದು):

ಊ) ರಾಜ್ಯದಲ್ಲಿ ಒಟ್ಟು ಮಳೆ ಆಶ್ರಿತ ಪ್ರದೇಶದ ಜಲಾನಯನ ಅಭಿವೃದ್ಧಿ ಕೆಲಸಕ್ಕೆ ಬೇಕಾಗುವ ಒಟ್ಟು ಸಂಪನ್ಮೂಲ ಎಷ್ಟು:

ಋ) ಪ್ರಸಕ್ತ ವರ್ಷ ಈ ಎಲ್ಲಾ ಯೋಜನೆಗಳಿಗಾಗಿ ಮೀಸಲಿಟ್ಟಿರುವ ಹಣ ಎಷ್ಟು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು):

ಅ) ರಾಜ್ಯದಲ್ಲಿ ಲಭ್ಯವಿರುವ ಕೃಷಿ ಭೂಮಿಯ ವಿಸ್ತೀರ್ಣ 107.00 ಲಕ್ಷ ಹೆಕ್ಟೇರ್.

ಆ) ಮಳೆ ಆಶ್ರಿತ ಕೃಷಿ ಪ್ರದೇಶ 84.00 ಲಕ್ಷ ಹೆಕ್ಟೇರ್‌ಗಳು

ಇ) ಮಳೆ ಆಶ್ರಿತ ಕೃಷಿ ಪ್ರದೇಶದಲ್ಲಿ ಸರ್ಕಾರದ ವಿವಿಧ ಯೋಜನೆಗಳಿಂದ ಮಣ್ಣು ಹಾಗೂ ನೀರು ಸಂಗ್ರಹಣೆಗಾಗಿ ಬದುಗಳ ನಿರ್ಮಾಣ, ಕೃಷಿ ಹೊಂಡ, ನಾಲಾ ಬದು, ತಡೆ ಹಣಿ, ಇತ್ಯಾದಿಗಳ ನಿರ್ಮಾಣದ ಮೂಲಕ ಅಭಿವೃದ್ಧಿಪಡಿಸಲಾಗುತ್ತಿದೆ.

ಈ) ಪ್ರಾರಂಭದಿಂದ ಮಾರ್ಚ 04 ಅಂತ್ಯದವರೆಗೆ 32.22 ಲಕ್ಷ ಹೆಕ್ಟೇರ್ ಪ್ರದೇಶ ಅಭಿವೃದ್ಧಿಪಡಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ) ಅಗತ್ಯತ ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಪರಿಶೀಲಿಸುವುದು.

ಊ) ಮುಂದುವರಿದ ಯೋಜನೆಗಳನ್ನು ಹೊರತುಪಡಿಸಿ ಪ್ರತಿ ಹೆಕ್ಟೇರಿಗೆ ರೂ. 6900 ರಂತೆ ಬಾಕಿ ಇರುವ ಪ್ರದೇಶವನ್ನು ಅಭಿವೃದ್ಧಿಪಡಿಸಲು ರೂ. 4544.24 ಕೋಟಿ ರೂ.ಗಳು ಬೇಕಾಗಿರುತ್ತದೆ.

ಋ) 2004-05ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಅಂದಾಜು ರೂ. 188.41 ಕೋಟಿ ರೂ. ಗಳನ್ನು ಮೀಸಲಿಡಲಾಗಿದೆ. (ಫೆಬ್ರವರಿ 2004 ಆಯವ್ಯಯದಲ್ಲಿದ್ದಂತೆ)

ಅನುಬಂಧ-1

ಜಿಲ್ಲಾವಾರು ಪ್ರಾರಂಭದಿಂದ ಮಾರ್ಚ್-2004ರ ಅಂತ್ಯದವರೆಗೆ ಅಭಿವೃದ್ಧಿಪಡಿಸಿದ ಜಲಾನಯನ ಪ್ರದೇಶ

(ರೂ. ಲಕ್ಷಗಳಲ್ಲಿ ಪ್ರದೇಶ: ಹೆಕ್ಟೇರ್‌ಗಳಲ್ಲಿ)

ಕ್ರ.ಸಂ.	ಜಿಲ್ಲೆಯ ಹೆಸರು	ಪ್ರಾರಂಭದಿಂದ ಮಾರ್ಚ್-2004ರ ಅಂತ್ಯದವರೆಗೆ ಅಭಿವೃದ್ಧಿಪಡಿಸಿದ ಜಲಾನಯನ ಪ್ರದೇಶ
1	2	3
1	ಶಿವಮೊಗ್ಗ	15234.00
2	ದಕ್ಷಿಣ ಕನ್ನಡ	6629.00
3	ರಾಯಚೂರು	61207.00
4	ಕೊಡಗು	29274.00
5	ಚಿಕ್ಕಮಗಳೂರು	86714.00
6	ಮೈಸೂರು	70308.00
7	ಚಿತ್ರದುರ್ಗ	130173.00

1	2	3
8	ದಾವಣಗೆರೆ	88199.00
9	ಕೋಲಾರ	149200.00
10	ಬಳ್ಳಾರಿ	115511.00
11	ಧಾರವಾಡ	85515.00
12	ತುಮಕೂರು	199424.00
13	ಗದಗ್	124622.00
14	ಬಿಜಾಪುರ	149423.00
15	ಬೆಂಗಳೂರು (ನಗರ)	23924.00
16	ಮಂಡ್ಯಾ	73517.00
17	ಚಾಮರಾಜನಗರ	122003.00
18	ಬಾಗಲಕೋಟೆ	155293.00
19	ಹಾಸನ	151048.00
20	ಬೆಂಗಳೂರು (ಗ್ರಾಮಾಂತರ)	110128.00
21	ಉಡುಪಿ	61789.00
22	ಹಾವೇರಿ	125908.00
23	ಬೆಳಗಾಂ	267516.00
24	ಉತ್ತರ ಕನ್ನಡ	93710.00
25	ಗುಲ್ಬರ್ಗಾ	401253.00
26	ಕೊಪ್ಪಳ	138154.00
27	ಬೀದರ್	217345.00
	ಒಟ್ಟು	3,222,021.00

Annexure-1

District wise Watershed Area Developed/since inception upto March-2004

(Rs. in lakhs Area in Hects)

Sl.No.	Name of the District	Area Developed Since inception upto March-04
1	2	3
1	Shimoga	15234.00
2	D. Kannada	6629.00
3	Raichur	61207.00
4	Kodagu	29274.00

1	2	3
5	Chikkamagalur	86714.00
6	Mysore	70308.00
7	Chitradurga	130173.00
8	Davanagere	88199.00
9	Kolar	149200.00
10	Bellary	115511.00
11	Dharwad	85515.00
12	Tumkur	168424.00
13	Gadag	124622.00
14	Bijapur	149423.00
15	Bangalore (U)	23924.00
16	Mandya	73517.00
17	Chamarajanagar	122003.00
18	Bagalkot	155293.00
19	Hassan	151048.00
20	Bangalore(R)	110128.00
21	Udupi	61789.00
22	Haveri	125908.00
23	Belgaum	267516.00
24	U. Kannada	93710.00
25	Gulbarga	401253.00
26	Koppal	138154.00
27	Bidar	217345.00
	State total	3,222,021.00

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಗದಗ ಜಿಲ್ಲೆಯಲ್ಲಿ 80 ಪರ್ಸೆಂಟ್ ಬರಪೀಡಿತ ಪ್ರದೇಶವಾಗಿದೆ. ತಮ್ಮ ಜಿಲ್ಲೆಯಲ್ಲಿಯೂ ಅದೇ ರೀತಿ ಇದೆ. ಈ ಎರಡೂ ಜಿಲ್ಲೆಗಳಲ್ಲಿ ಬರಪೀಡಿತ ಪ್ರದೇಶಗಳಲ್ಲಿ ಬದುಕುವ ರೈತರ ಜೀವನ ಸುಖಮಯವಾಗಲು ಆ ಎರಡೂ ಜಿಲ್ಲೆಗಳ ಮಳೆಯಾಶ್ರಿತ ಪ್ರದೇಶವನ್ನು ಜಲಾನಯನ ಅಭಿವೃದ್ಧಿಯೊಳಗೆ ಮುಂದಿನ 3 ವರ್ಷಗಳಲ್ಲಿ ಸಂಪೂರ್ಣವಾಗಿ ತಾವು ಕವರ್ ಮಾಡಲು ಸಾಧ್ಯವೆ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ, ಈಗಾಗಲೇ ಡಾ: ನಂಜುಂಡಪ್ಪ ರಿಪೋರ್ಟ್ ಪ್ರಕಾರ, 37 ತಾಲ್ಲೂಕುಗಳು ಬ್ಯಾಕ್‌ವರ್ಡ್ ತಾಲ್ಲೂಕುಗಳಾಗಿವೆ. ಅದರಲ್ಲಿ ಗದಗ ಕೂಡ ಇದೆ. ಅದನ್ನು 3 ವರ್ಷಗಳಲ್ಲಿ ಅಭಿವೃದ್ಧಿಪಡಿಸಲು ಪ್ರಯತ್ನ ಮಾಡುತ್ತೇವೆ ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲು ಇಚ್ಛಿಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 25 ಪರ್ಸೆಂಟ್ ನೀರಾವರಿ ಇದೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್ : ಮಾನ್ಯ ಅಧ್ಯಕ್ಷರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಪ್ರಕಾರ 75 ಪರ್ಸೆಂಟ್ ಮಳೆ ಯಾಶ್ರಿತ ಕೃಷಿ ಭೂಮಿ ಇದೆ. ತಮ್ಮ ಕಾಲದಲ್ಲಿ ಸರ್ಕಾರ ಯೋಚಿಸಿ, ನೀರಾವರಿಗೆ ನಾವು ಆದ್ಯತೆ ಕೊಡುತ್ತಿದ್ದೇವೆ, ಕೊಡೋಣ. ಆದರೆ, ಕರೆಕಟ್ಟೆಗಳ ಆಶ್ರಯದ ಮೇಲೆ, ಮಳೆ ಆಶ್ರಯದ ಮೇಲೆ ಖುಷ್ಕಿ ಭೂಮಿಯಲ್ಲಿ 3 ವರ್ಷಗಳಿಂದ ಬರಗಾಲಕ್ಕೆ ತುತ್ತಾದವರು, ಸಫರ್‌ರಾಗಿರುವವರು ಈ ಭಾಗದ ಜನರು. ಇವರಿಗೇನಾದರೂ ವಿಶೇಷ ಕಾರ್ಯಕ್ರಮ ಇದೆಯೇ? ಅಂತರ್ಜಲ ಉಳಿಯುವುದಕ್ಕೆ ಏನಾದರೂ ಮಾಡುವುದಿದೆಯೇ? ಸಣ್ಣ ಮಟ್ಟ ನೀರಾವರಿಗೆ ಅನುಕೂಲ ಮಾಡಿಕೊಡುವುದು, ಇದಕ್ಕೇನಾದರೂ ಕಾರ್ಯಕ್ರಮ ಮಾಡುವುದಕ್ಕೆ ಯೋಜನೆಯನ್ನು ತಾವು ಮಾಡಬಹುದೆ?

ಶ್ರೀ ಕೆ. ಶ್ರೀನಿವಾಸಗೌಡ : ಈಗಾಗಲೇ 2000ದ ಇಸವಿಯಿಂದ ಜಲಾನಯನ, ಸುಜಲ, ನಮ್ಮ ಕೆರೆ, ಇವೆಲ್ಲಾ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಈಗಾಗಲೇ ಇದರ ಮೇಲೆ ಕೆಲಸ ಪ್ರಗತಿಯಲ್ಲಿದೆ. ಅದರಲ್ಲೂ ಬಯಲುಸೀಮೆಯಲ್ಲಿ ನೀರನ್ನು ಭೂಮಿಗೆ ಉಣಿಸುವ ಕೆಲಸ ಬಹಳ ಮುಖ್ಯವಾದುದಾಗಿದೆ. ಇದಕ್ಕೆ ಹೊಲಕ್ಕೊಂದು ಹೊಂಡ ಇದನ್ನೂ ಕೂಡ ಈ ರಾಜ್ಯದಲ್ಲಿ ತರಬೇಕು, ಮಾಡಬೇಕೆನ್ನುವುದನ್ನು ತೀರ್ಮಾನಿಸಿದ್ದೇವೆ. ಇದರ ಮೇಲೆ ನಾವು ಸಮರೋಪಾದಿಯಲ್ಲಿ ಕೆಲಸ ಮಾಡಿ, ಈ ನೀರನ್ನು ಉಳಿಸುವ ಕೆಲಸ ಮಾಡುತ್ತೇವೆ. ಇದರ ಜೊತೆಗೆ ಕೆರೆಗಳ ಜೊತೆಗೆ ಚೆಕ್‌ಡ್ಯಾಂಗಳನ್ನು ಎಲ್ಲ ಜಾಗದಲ್ಲಿ ಕಟ್ಟಿ ನೀರು ಹರಿಯದ ಹಾಗೆ, ಅದನ್ನು ನಿಲ್ಲಿಸುವ ಕೆಲಸ ಮಾಡಬೇಕು. ಈ 3 ವರ್ಷಗಳಲ್ಲಿ ಏನು ಬಯಲುಸೀಮೆ ಪ್ರದೇಶವಿದೆ, ಅದಕ್ಕೆಲ್ಲಾ ನೀರನ್ನು ಉಣಿಸುವ ಕೆಲಸ ಮಾಡಬೇಕು. ಉದಾಹರಣೆಗೆ, ನಮ್ಮ ಪಕ್ಕದ ರಾಜ್ಯದ ಜಿಲ್ಲೆಯಾದ ಕುಪ್ಪಂನಲ್ಲಿ ನೀರಿನ ಮಟ್ಟ ಮೇಲಕ್ಕೆ ಬಂದಿದೆ. ಅದನ್ನೆಲ್ಲಾ ನಾನು ಹೋಗಿ ನೋಡಿದ್ದೇನೆ. ಆ ರೀತಿ ಎಲ್ಲಾ ಜಲಾನಯನ ಪ್ರದೇಶಗಳನ್ನು ಮಾಡಬೇಕೆಂದು ತೀರ್ಮಾನಿಸಿದ್ದೇವೆ. ಆ ದಿಕ್ಕಿನಲ್ಲಿ ಚಿಂತಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಏನು ಏನೋ ಹೇಳಿದರು. ನಿಮ್ಮದೇ ಉತ್ತರದ ಪ್ರಕಾರ 6,900 ರೂಪಾಯಿ ಪರ್ ಹೆಕ್ಟೇರ್‌ಗೆ ಬೇಕಾಗುತ್ತದೆ. ಎಲ್ಲಾ ಭೂಮಿಯನ್ನು ನೀರು ಈ ಕಾರ್ಯಕ್ರಮಕ್ಕೆ ಒಳಪಡಿಸುವುದಕ್ಕೆ 4,544 ಕೋಟಿ ರೂಪಾಯಿಗಳು ಬೇಕು. ಈ ವರ್ಷದ ಆಯವ್ಯಯದಲ್ಲಿ ನೀವು ಇಟ್ಟಿರುವುದು 188 ಕೋಟಿ ರೂಪಾಯಿಗಳು. ನೀವು ಹೇಳುತ್ತಿರುವ ಎಲ್ಲ ಯೋಜನೆಗಳು 188 ಕೋಟಿ ರೂ.ಗಳಲ್ಲಿ as against the demand of Rs. 4,544 crore, ಸಾಧ್ಯವೇ. ಅಥವಾ ಬೇರೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಎಷ್ಟು ಜಾಗವಿದೆ, ಮಳೆ ನಂಬಿರುವ ಜನ ಯಾರಿದ್ದಾರೆ, ಎಲ್ಲಿ ನೀರಾವರಿ ಇಲ್ಲ, ಎಲ್ಲಿ ಕ್ಷಾಮಪೀಡಿತ ಪ್ರದೇಶವಿದೆ, ಅಲ್ಲಿಯ ಜನರ ಬದುಕು ಸುಗಮಗೊಳಿಸಲು, ಈ ಲಿಮಿಟ್ಸ್ ಅನ್ನು ಬಿಟ್ಟು, ನೀವೇ ಹೇಳಿದಂತೆ ವಾರ್ ಫುಟಿಂಗ್‌ನಲ್ಲಿ ಬೇರೆ ಯಾವುದಾದರೂ ರೂಪದಲ್ಲಿ ಸಂಪನ್ಮೂಲಗಳನ್ನು

ಕ್ರೋಢೀಕರಿಸಿ, ಹೆಚ್ಚು ಪ್ರದೇಶಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆಯೇ? ಆ ಬಗ್ಗೆ ಯೋಚಿಸಿದ್ದೀರಾ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಗಹನವಾದಂಥ ವಿಷಯವನ್ನು ಹೇಳಿದ್ದಾರೆ. ಈಗಾಗಲೇ ಅಗ್ರಿಕಲ್ಚರ್ ಡೆವಲೆಪ್‌ಮೆಂಟ್ ಕಾರ್ಪೊರೇಷನ್ ಮಾಡಲಿಕ್ಕೆ ನಾವು ಯೋಚಿಸಿದ್ದೇವೆ, ಇದನ್ನು ಈ ವರ್ಷವೇ ಅದನ್ನು ರಿಜಿಸ್ಟರ್ ಮಾಡಿಸಿ ಮಾಡಿಸಬೇಕೆಂದು ಪ್ರಯತ್ನ ಮಾಡಿದ್ದೇವೆ. ನಮ್ಮ ಆರ್ಥಿಕ ಮಂತ್ರಿಗಳು ಈ ಸಾರಿ ಒಂದು ಹತ್ತು ತಿಂಗಳು ಆ ವಿಚಾರ ಬಿಡಿ ನಂತರ ಅದನ್ನು ಮಾಡಿ ಅದಕ್ಕೆ ನಾನು ನಂತರ ಬೇರೆ ಹಣವನ್ನು ಒದಗಿಸುತ್ತೇನೆಂದು ಹೇಳಿದ್ದರಿಂದ ಅದನ್ನು ತೆಗೆದುಕೊಂಡು, ಈಗ ಯಾವ ರೀತಿಯಲ್ಲಿ ಕೃಷ್ಣಾ, ಕಾವೇರಿ ಕಣಿವೆಯಲ್ಲಿ ಹಣವನ್ನು ಎತ್ತಿ ಅದರಲ್ಲಿ ಏನು ಅಭಿವೃದ್ಧಿಪಡಿಸುತ್ತಿದ್ದಾರೆ, ಅದೇ ರೀತಿ ನಾವು ಇದರ ಮೂಲಕ ಹಣವನ್ನು ಎತ್ತಿ ಇಡೀ ಬಯಲು ಸೀಮೆಯನ್ನು ನಾವು ಅಭಿವೃದ್ಧಿಪಡಿಸುವಂಥದ್ದನ್ನು ತೀರ್ಮಾನ ಮಾಡಿ ಅದಕ್ಕೋಸ್ಕರವೇ ನಾನು ಮೂರು ವರ್ಷದಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳಿದ್ದು. ಇದನ್ನು ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿನಲ್ಲಿ ಒಂದು ಜಲಾನಯನ ಸಂಸ್ಥೆ ಇದೆ, ಅಲ್ಲಿ ಯಾವುದೇ ಕೆಲಸವಾಗುತ್ತಿಲ್ಲ ಕೇವಲ ಸಂಬಳ ಕೊಡುವುದು ಬಿಟ್ಟರೆ ಬೇರೆ ಏನೂ ಇಲ್ಲ. ಅಲ್ಲಿ ರೈತರಿಗೆ ಸರಿಯಾದಂಥ ಮಾಹಿತಿಯನ್ನು ಕೊಡುವುದಿಲ್ಲ, ಅಲ್ಲಿ ಹೊಂಡ ಹಾಕಬೇಕು ಇದರಿಂದ ನೀರು ಹಿಂಗುತ್ತದೆಂದು ನೀವು ಹೇಳಿದಿರಿ, ಆದರೆ ಅಲ್ಲಿ ಅವರು ಯಾವುದೇ ಕೆಲಸವನ್ನು ಮಾಡುತ್ತಿಲ್ಲ, ದಯಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಕೃಷಿ ಮಾರುಕಟ್ಟೆ ಇಲಾಖೆಯಿಂದ ಗ್ರಾಮೀಣ ರಸ್ತೆಗಳ ಅಭಿವೃದ್ಧಿ

22 (262) : ಶ್ರೀ ಶ್ರೀರಾಮ ರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಇಲಾಖೆಯಿಂದ ಪ್ರಸಕ್ತ ವರ್ಷ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಆ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳಿರತಕ್ಕಂಥದ್ದು, ಹಳ್ಳಿಗಾಡಿನ ಪ್ರದೇಶದಲ್ಲಿ ಹಿಂದೆ ಮಾನ್ಯ ನಾಗಪ್ಪನವರು ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ರಿಮೋಟ್ ವಿಲೇಜೆಸ್ ಏನು ಇವೆ, ಅಲ್ಲಿ ರೈತರು ಬೆಳೆದಂಥ ಮಾಲನ್ನು ಮಾರುಕಟ್ಟೆಗೆ ಸಾಗಿಸಲಿಕ್ಕೆ ಬೇಕು ಎಂದು ಉದ್ದೇಶ ಇಟ್ಟುಕೊಂಡು ರಸ್ತೆ ಕೆಲಸ ಪ್ರಾರಂಭಿಸಿದರು. ಮೇನ್ ರೋಡ್‌ಗಳಿಗೆ ಲಿಂಕ್ ರೋಡ್ ಬರುವ ರೀತಿಯಲ್ಲಿ ಮಾಡಿದರು. ಇದು ಬಹಳ ಯಶಸ್ವಿಯಾಗಿ ನಡೆಯಿತು. ಇದನ್ನು